ಓ ಎಸ್ ನಂ.10/2025

ಪಿ.ಡಬ್ಲ್ಯೂ -2 ಸಿದ್ದಪ್ಪ ತಂದೆ ಭೀಮಶಾ ಗೊಡ್ಡೋಡಗಿ

(ಇಂದು ದಿನಾಂಕಃ 16-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಪಾಟೀ ಸವಾಲುಃ ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ವಾದಿ ಈ ದಾವೆಯನ್ನು ಯಾವ ವಿಚಾರಕ್ಕಾಗಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ವಾದಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ೧೫-೧೬ ವರ್ಷ ದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಸನ್ ತಂದೆ ಇಮ್ಮಣ್ಣ ಆವೇರಿ ಗೊತ್ತು. ದಾವಾ ಜಮೀನಿನ ಸರ್ವೆ ನಂಬರ ೩೫೭ ಆಗಿರುತ್ತದೆ. ದಾವಾ ಜಮೀನಿನ ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಇಮ್ಮಣ್ಣರವರ ತಂದೆಯ ಹೆಸರು ಹುಸೇನ್ ಎಂದರೆ ಸರಿ. ದಾವಾ ಜಮೀನು ಮೊದಲು ಇಮ್ಮಣ್ಣರವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಈ ಮೊದಲು ಪ್ರತಿವಾದಿ ಹಾಗೂ ಇತರರ ವಿರುದ್ದ ಒಂದು ದಾವೆ ಹಾಕಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ವಾದಿ ದಾರಿಯ ವಿಚಾರವಾಗಿ ಹಾಕಿದ್ದರು ಮತ್ತು ಅದು

ವಾದಿಯ ವಿರುದ್ದ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಫಾತೀಮಾ ಬೀ ರವರಿಗೆ ಮಾಲನ ಬೀ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ. ಮಾಲನ ಬೀ ರವರು ರವಿ ಎನ್ನುವವರಿಗೆ ಸರ್ವೆ ನಂಬರ ೩೫೭ ರಲ್ಲಿ ಪಶ್ಚಿಮ ಭಾಗದ ೩ ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

೨. ದಾವಾ ಜಮೀನು ೧೯೬೩ ರಿಂದ ಇಲ್ಲಿಯವರೆಗೆ ಮಾಲನ ಬೀ ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ವಾದಿಗೆ ಗೊತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವಾ ಆಸ್ತಿಯ ಕುರಿತು ಯಾವುದೆ ಮಾಹಿತಿ ಇಲ್ಲದೆ ಇದ್ದರೂ ವಾದಿಯ ಮಾತುಕೇಳಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ದಾವಾ ಜಮೀನು ಸಾಗುವಳಿ ಮಾಡಿರುತ್ತೇನೆ ಎನ್ನುತ್ತಾರೆ. ನಾನು ದಾವಾ ಜಮೀನಿನ ದಾಖಲೆಗಳನ್ನು ನೋಡಿರುವುದಿಲ್ಲ. ನನಗೆ ಯಾವುದೆ ಮಾಹಿತಿ ಇರದೆ ಇದ್ದರೂ ಸಹ ನಾನು ವಾದಿಗೆ ಸಹಾಯ ಮಾಡಲು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಅಫಜಲಪೂರ.